

ಕನ್ನಡ ಚಳವಳಿಗೆ ತಂತ್ರಜ್ಞಾನವೂ ಬೇಕು, ಯುವಮನಸ್ಸುಗಳೂ ಬೇಕು
ಫೋಟೊ: ಕಿಶೋರ್ ಕುಮಾರ್ ಬೋಳಾರ್

ಮೂಡಿದ್ದು, ಎಲ್ಲಾ ನೇಮಕಾತಿ ಪರೀಕ್ಷೆಗಳಲ್ಲಿ ಕನ್ನಡಕ್ಕೆ ಅವಕಾಶ ಇರಬೇಕೆಂಬ ಬೇಡಿಕೆಯೊಂದಿಗೆ ಈಗ ಕನ್ನಡ ಚಳವಳಿಯ ಗಮನ ಸಮಾನ ಅವಕಾಶಗಳ ಹಕ್ಕಿಗಾಗಿ ಹೋರಾಡುವತ್ತ ಸಾಗಿದೆ.

## ಕನ್ನಡವೆಂದರೆ ಬರಿನುಡಿಯಲ್ಲ

ಕನ್ನಡವೆಂದರೆ ಏನು, ಅದರ ತನ್ನತನ ಏನು, ಕನ್ನಡ ಮಾಧ್ಯಮ ಕಲಿಕೆಯ ಮಹತ್ವವೇನು, ಅದರ ವೈಫಲ್ಯಕ್ಕೆ ಕಾರಣವೇನು, ಕನ್ನಡ ಮಾಧ್ಯಮದಲ್ಲಿನ ಕಲಿಕೆಯು ಎದುರಿಸುತ್ತಿರುವ ಸವಾಲು, ಅಳವಡಿಸಿಕೊಳ್ಳಬೇಕಾದ ಪರಿಹಾರ ಕ್ರಮಗಳು ಮತ್ತು ಸಾಗಬೇಕಾದ ದಾರಿಗಳ ಬಗ್ಗೆ ಇಂದಿನ ಯುವ ಕನ್ನಡಿಗರು ಕೆಲಸ ಮಾಡುತ್ತಿರುವುದು ಮಹತ್ವದ್ದಾಗಿದೆ. ಕನ್ನಡ ಮಾಧ್ಯಮದ ಮತ್ತು ಕನ್ನಡ ಶಾಲೆಗಳ ಉಳಿವಿನ ಅಗತ್ಯವನ್ನು ಇವರು ಮನಗಂಡಿದ್ದಾರೆ. ಕನ್ನಡ ಮಾಧ್ಯಮದ ಪಠ್ಯಪುಸ್ತಕಗಳನ್ನು ಹೇಗೆ ಕಬ್ಬಿಣದ ಕಡಲೆಯನ್ನಾಗಿಸಲಾಗಿದೆ ಎಂಬ ಅರಿವು ಇವರಿಗಿದೆ. ಕನ್ನಡದ ಹೆಸರಲ್ಲಿ ಹೆರನುಡಿಯ ಪದಗಳನ್ನು ಬಳಸಿ, ಸರಳವಾಗಿ ಅರ್ಥವಾಗುವ ಕನ್ನಡಪದಗಳನ್ನು ಬಳಸದಿರುವ ಸಮಸ್ಯೆ, ಕನ್ನಡ ಬೇರಿನ ಪದಗಳನ್ನು ಕಟ್ಟಬೇಕಾದ ಅಗತ್ಯಗಳ ಬಗ್ಗೆ ಮನವರಿಕೆ ಮಾಡಿಕೊಂಡು ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುತ್ತಿದ್ದಾರೆ. ಕನ್ನಡ ನುಡಿಯ ಬಗೆಗಿನ ಭಾಷಾವಿಜ್ಞಾನದ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಿರುವ ಕನ್ನಡಿಗರ ಸಂಖ್ಯೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಾ ಇದೆ.

## ಗ್ರಾಹಕ ಸೇವೆಗಾಗಿ ಹಕ್ಕೊತ್ತಾಯ

ಕನ್ನಡಿಗರಲ್ಲಿ ಉದ್ಯಮಶೀಲತೆಯು ಹೆಚ್ಚಬೇಕು ಎಂಬ ಅರಿವು ಇಂದಿನ ಕನ್ನಡಿಗರಲ್ಲಿ ಮೂಡುತ್ತಿದೆ. ಕನ್ನಡದಲ್ಲಿ ಗ್ರಾಹಕ ಸೇವೆಯನ್ನು ಪಡೆಯುವುದರ ಮಹತ್ವ ತಿಳಿದಿದೆ. ತಮಗೆ ಬೇರೆ ಭಾಷೆಗಳು ತಿಳಿದಿದ್ದರೂ, ಕೇವಲ ಕನ್ನಡ ಮಾತ್ರ ಗೊತ್ತಿರುವ ಮೂರು ನಾಲ್ಕು ಕೋಟಿ ಕನ್ನಡಿಗರ ಹಿತ ಕಾಪಾಡಬೇಕೆಂದರೆ, ತಮ್ಮದೇ ನೆಲದಲ್ಲಿ ತಾವು ಕೀಳರಿಮೆಯಿಲ್ಲದೆ, ಅನನುಕೂಲವಿಲ್ಲದೆ ಬಾಳಬೇಕಾದರೆ ಕನ್ನಡದಲ್ಲಿ ಪ್ರತಿಯೊಂದೂ ದೊರೆಯಬೇಕು ಎನ್ನುವುದು ತಿಳಿದಿದೆ. ಹಾಗಾಗಿ ಕನ್ನಡ ಗ್ರಾಹಕ ಚಳವಳಿಯು ಇಂದು ಪರಿಣಾಮಕಾರಿಯಾಗಿ ನಡೆದಿದೆ.

ಯಾವುದೇ ಉತ್ಪನ್ನವಾದರೂ ಅದನ್ನು ಕೊಂಡುಕೊಂಡ ಗ್ರಾಹಕರು ನೀಡುವ ದೂರಿಗೆ ಅತ್ಯಂತ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಸಾವಿರ ಮಂದಿ ಜನಸಾಮಾನ್ಯರು ಸಂಸ್ಥೆಯ ಎದುರು ನಿಂತು ಪ್ರತಿಭಟನೆ ಮಾಡುವುದಕ್ಕೂ ನೂರು ಮಂದಿ ಗ್ರಾಹಕರು ಒಂದು ಮಿಂಚಂಚೆ ಬರೆದು ದೂರುವುದಕ್ಕೂ ನಡುವೆ ಅಜಗಜಾಂತರ ವ್ಯತ್ಯಾಸವಿದೆ.

ಗ್ರಾಹಕನ ದನಿಯ ತೂಕಕ್ಕೆ ಬೆಲೆ ಹೆಚ್ಚು. ಹಾಗಾಗಿ ಪ್ರತಿಯೊಬ್ಬ ಕನ್ನಡಿಗ ಗ್ರಾಹಕನೂ ಕನ್ನಡದಲ್ಲಿ ಗ್ರಾಹಕಸೇವೆಯನ್ನು ಹಕ್ಕೊತ್ತಾಯ ಮಾಡುವ ಮೂಲಕ ಬದಲಾವಣೆಯನ್ನು ತರಲು ಸಾಧ್ಯವಿದೆ ಎನ್ನುವುದನ್ನು ನೂರಾರು ದೃಷ್ಟಾಂತಗಳ ಮೂಲಕ ಸಾಬೀತು ಪಡಿಸಲಾಗಿದೆ.

## ಒಕ್ಕೂಟ ಭಾರತ

ಭಾರತವನ್ನು ಕನ್ನಡನಾಡು ಸೇರಿಕೊಂಡ ನಂತರ ನಾಡಿಗೆ ಅನುಕೂಲವೆಷ್ಟಾಯಿತು, ಅನನುಕೂಲ ಎಷ್ಟಾಯಿತು ಎನ್ನುವುದನ್ನು ಇಂದಿನ ಕನ್ನಡದ ಯುವ ಮನಸ್ಸುಗಳು ದಾಖಲೆಗಳ ಹುಡುಕಾಟಗಳ ಮೂಲಕ ಸತ್ಯದ ಅನಾವರಣ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಶೇಖರವಾಗಿ ಒಕ್ಕೂಟ ಸರ್ಕಾರಕ್ಕೆ ಪ್ರತಿವರ್ಷ ಹೋಗುವ ತೆರಿಗೆಯೆಷ್ಟು, ಅದರಲ್ಲಿ ಮರಳಿ ನಾಡಿಗೆ ಬರುತ್ತಿರುವುದು ಎಷ್ಟು, ಈ ತೆರಿಗೆ ಹಣದ ಸಂಗ್ರಹ ಮತ್ತು ಹಂಚಿಕೆಗಳ ವಿಚಾರದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆಯೇ? ನೆರೆ–ಬರ ಪರಿಹಾರಗಳಂತಹ ವಿಷಯಗಳಲ್ಲಿ ನಮ್ಮೊಂದಿಗೆ ಹೇಗೆ ನಡೆದುಕೊಳ್ಳಲಾಗುತ್ತಿದೆ, ತಾರತಮ್ಯವಾಗುತ್ತಿದೆಯೇ ಮುಂತಾದ ವಿಷಯಗಳನ್ನು ಅಂಕಿಅಂಶಗಳ ಸಮೇತವಾಗಿ ಯುವ ಕನ್ನಡಿಗ ಚಳವಳಿಗಾರರು ಆಳವಾದ ಅಧ್ಯಯನಗಳ ಮೂಲಕ ಕಂಡುಕೊಂಡು ಬಯಲು ಮಾಡುತ್ತಿದ್ದಾರೆ. ಈ ಅಂಶಗಳೆಲ್ಲಾ ಇಂದು ರಾಜಕಾರಣದ ಮುನ್ನೆಲೆಗೆ ನಿಧಾನವಾಗಿ ಬರುತ್ತಿರುವುದನ್ನು ನಾವು ಕನ್ನಡ ಚಳವಳಿಯ ಗೆಲುವು ಎಂದು ಭಾವಿಸಬೇಕಾಗುತ್ತದೆ.

ಒಕ್ಕೂಟ ಸರ್ಕಾರ ಮತ್ತು ರಾಜ್ಯಗಳ ಸಂಬಂಧ, ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಕೇಂದ್ರೀಕರಣ, ದುರ್ಬಲವಾಗುತ್ತಿರುವ ಒಕ್ಕೂಟ ವ್ಯವಸ್ಥೆ, ಕುಗ್ಗುತ್ತಿರುವ ರಾಜ್ಯದ ಹಕ್ಕುಗಳು, ಮುಂತಾದ ವಿಷಯಗಳೆಲ್ಲವೂ ಇಂದು ಕನ್ನಡ ಚಳವಳಿಯ ವ್ಯಾಪ್ತಿಯೊಳಗೇ ಬಂದು ಸೇರಿಕೊಂಡಿವೆ.

## ಜನಸಂಖ್ಯಾ ನೀತಿ

1970ರ ನಂತರ ಆದ ಕುಟುಂಬ ಯೋಜನೆಗಳ ಪ್ರಯತ್ನದ ಫಲವಾಗಿ ಕನ್ನಡನಾಡಿನ ಜನಸಂಖ್ಯೆ ಹೇಗೆ ಅಳಿವಿನತ್ತ ಸಾಗುತ್ತಿದೆ ಎನ್ನುವುದರ ಬಗ್ಗೆ ಅಧ್ಯಯನಗಳನ್ನು ಕನ್ನಡ ಚಳವಳಿಗಾರರು ಅರಿತಿದ್ದಾರೆ. ರಾಜ್ಯದ 'ಹೆರುವೆಣಿಕೆ' (Total Fertility Rate) ಗುರಿಗಳನ್ನು ಅಪಾಯದ ಮಟ್ಟಕ್ಕಿಂತ ಕೆಳಗೆ ನಿಗದಿಮಾಡಲಾಗುತ್ತಿದೆ. ಆ ಮೂಲಕ ಈಗಾಗಲೇ ಆಗಿರುವ ಹಾನಿಯೇನು,

ಸುವರ್ಣ ಸಂಭ್ರಮ